# ಇನ್ನು ನಾರಿಯಲ್ ಕೀಳಲು ನಾರಿಯರು....!

ಕಾಸರಗೋಡು, ಆ.26: ಮಹಿಳೆಯರು ಕಾಲಿಡದ ಕ್ಷೇತ್ರಗಳಿಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವ ಮಹಿಳೆಯರು ಇದೀಗ ತೆಂಗಿರ ಮರವೇರಲೂ ಸಿದ್ಧರಾಗಿದ್ದಾರೆ.

ತೆಂಗಿನ ಮರವೇರಿ ತೆಂಗು ಕೀಳುವ ಕಾರ್ಮಿಕರ ಕೊರತೆಯನ್ನು ನೀಗಿಸಲು 'ತೆಂಗಿನ ಸಹಪಾಟಿ ಬಳಗ ತರಬೇತಿ ಯೋಜನೆ'ಯಲ್ಲಿ ಪುರುಷರು ಮಾತ್ರವಲ್ಲ ಮಹಿಳೆಯರೂ ತರಬೇತಿ ಪಡೆಯುತ್ತಿದ್ದಾರೆ. ತೆಂಗು ಅಭಿವೃದ್ಧಿ ಮಂಡಳಿ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಯುಕ್ತವಾಗಿ ಕಾಸರಗೋಡಿನ ಸಿಪಿಸಿಆರ್‌ಐಯಲ್ಲಿ ನಡೆಸುವ ತೆಂಗಿನ ಮರವೇರುವ ತರಬೇತಿಯಲ್ಲಿ 17 ಮಂದಿ ಯುವತಿಯರು ಭಾವಹಿಸಿದ್ದಾರೆ. ಆರು ದಿನಗಳ ತನಕ ನಡೆಯುವ ಈ ತರಬೇತಿ ಶಿಬಿರದ ಬಳಿಕ ಮಹಿಳೆಯರೂ ತೆಂಗಿನ ಮರ ವೇರುವ ತರಬೇತಿ ಪಡೆದು ತೆಂಗಿನ ಮರವೇರುವ ಕಾರ್ಮಿಕರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಪ್ರಯತ್ನ ಶ್ಲಾಘನೀಯ.

ವೆಸ್ಟ್ ಎಳೇರಿ, ಬಳಾಲ್, ಕುತ್ತಿಕೋಲ್, ಕುಂಬಳೆ, ಪೈವಳಿಕೆ ಗ್ರಾಮ ಪಂಚಾಯತ್‌ಗಳಿಂದಲೂ, ನೀಲೇಶ್ವರ ನಗರಸಭೆಯಿಂದಲೂ ಯುವತಿಯರು ತೆಂಗಿನ ಮರವೇರುವ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಈ ಹಿಂದೆ ಹಲವಾರು ಮಂದಿ ಯುವಕರು ತರಿಬೇತಿ ಪಡೆದು ತೆಂಗಿನ ಮರವೇರಿ ತೆಂಗಿನ ಕಾಯಿ ಕೀಳುವ ಸ್ವೋದ್ಯೋಗದಲ್ಲಿ ತೊಡಗಿಕೊಂಡಿದ್ದು ಉತ್ತಮ ವರಮಾನವನ್ನು ಗಳಿಸುತ್ತಿದ್ದಾರೆ. ಈ ಪ್ರೇರಣೆಯಿಂದ ಮಹಿಳೆಯರೂ ತೆಂಗಿನ ಮರವೇರುವ ತರಬೇತಿ ಪಡೆಯಲು ಉತ್ಸುಕರಾಗಿದ್ದಾರೆ.

ಟಿ.ಎಸ್.ಮನೋಜ್ ಕುಮಾರ್ ಮಹಿಳೆಯರಿಗೆ ತರಬೇತಿ ನೀಡುತ್ತಿದ್ದು ಮರವೇರುವ ಯಂತ್ರದ ಮೂಲಕ ಮಹಿಳೆಯರು ತೆಂಗಿನ ಮರವೇರುತ್ತಿದ್ದಾರೆ.



ಪಿಸಿಆರ್‌ಐಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ತೆಂಗಿನ ಮರವೇರುವ ತರಬೇತಿಯಲ್ಲಿ ಭಾಗವಹಿಸಿ ತರಬೇತಿ ಪಡೆಯುತ್ತಿರುವ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಯುವತಿಯರು.